ದಿಃ 02-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಶ್ರೀ. ಟಿ.ಕೆ.ವಿ **1** ಮತ್ತು **2** ನೇ ಪ್ರತಿವಾದಿಗಳ ಪರ ವಕೀಲರಿಂದಃ</u>

ವಾದಿಯ ವಾರಸುದಾರರಾದ Plaintiff No.1(b) ರಿಂದ 1(d)ರವರು ನ್ಯಾಯಾಲಯಕ್ಕೆ ಹಾಜರಾಗಲು ತೊಂದರೆ ಇರುವುದಿಲ್ಲ. 1 ನೇ ಪ್ರತಿವಾದಿಯು ತೀರಿಕೊಂಡಿದ್ದಾರೆ. 1 ನೇ ಪ್ರತಿವಾದಿಗೆ ಮಕ್ಕಳು ಇರುವುದಿಲ್ಲ. ದಾವಾ ಆಸ್ತಿಯು ಪ್ರಸ್ತುತ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ನೀವು ದಾವಾ ಆಸ್ತಿಗೆ ಸಂಬಂಧಪಟ್ಟ ಪ್ರಸ್ತುತ ದಾಖಲೆಗಳನ್ನು ನೋಡಿರುವಿರಾ? ಹಾಗೂ ಅವು ಯಾರ ಹೆಸರಿನಲ್ಲಿದೆ ಎಂಬ ಪ್ರಶ್ನೆಗೆ ಸಾಕ್ಷಿ ದಾವಾ ಆಸ್ತಿಯ ದಾಖಲೆಗಳು ಈಗ 3 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಪ್ರಸ್ತುತ 3 ನೇ ಪ್ರತಿವಾದಿಯ ಹೆಸರಿನಲ್ಲಿರುವ ದಾವಾ ಆಸ್ತಿಯ ಸರ್ವೆ ನಂ. 68/4 ಆಗಿರುತ್ತದೆ. ದಾವಾ ಆಸ್ತಿಯ ಸರ್ವೆ ನಂಬರ್ ಬದಲಾಗಿರುವ ವಿಚಾರ ಹಾಗೂ ಅದು 3 ನೇ ಪ್ರತಿವಾದಿಯ ಹೆಸರಿಗೆ ಬದಲಾಗಿರುವ ವಿಷಯಗಳನ್ನು ನಮ್ಮ ವಾದ ಪತ್ರದಲ್ಲಿ ನಾವಾಗಲೀ, ನಮ್ಮ ತಂದೆಯವರಾಗಲೀ ಬರೆಸಿರುವುದಿಲ್ಲ. ದಾವಾ ಆಸ್ತಿಯ ದಾಖಲೆಗಳು 3 ನೇ ಪ್ರತಿವಾದಿಯ ಹೆಸರಿಗೆ ಯಾವ ಆಧಾರದ ಮೇಲೆ ಬದಲಾದವು ಎಂಬ ಪ್ರಶ್ನೆಗೆ ಸಾಕ್ಷಿ ಅವರು ಅಕ್ಕ-ಪಕ್ಕದಲ್ಲಿದ್ದವರು ಮತ್ತು ಅವರ ಹೆಸರಿಗೆ ಹೇಗೆ ಬದಲಾಗಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ದಿನಾಂಕ 14-05-2014 ರಂದು 3 ನೇ ಪ್ರತಿವಾದಿಗೆ ಮಾರಾಟವಾಗಿತ್ತು ಎಂದರೆ ಸಾಕ್ಷಿ ಸರಿ, ಈ ವಿಷಯ ನನಗೆ ನಂತರ ತಿಳಿಯಿತು ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರ ಆಗಿರುವ ವಿಚಾರ ನನ್ನ ತಂದೆಯವರಿಗೆ ಗೊತ್ತಿರಲಿಲ್ಲ. ಸದರಿ ಕ್ರಯ ಪತ್ರದ ವಿಚಾರವನ್ನು ನನ್ನ ತಂದೆಯವರು ಬದುಕಿರುವಾಗ ನನಗೆ ತಿಳಿಸಿದ್ದರು. ಸದರಿ ಕ್ರಯ ಪತ್ರ ನಮಗೆ ಅನ್ವಯವಾಗುವುದಿಲ್ಲವೆಂದು ನಮ್ಮ ವಾದ ಪತ್ರದಲ್ಲಿ ಹೇಳಿದ್ದೇವೆ. ನಮ್ಮ ವಾದ ಪತ್ರದಲ್ಲಿ ಸದರಿ ಕ್ರಯ ಪತ್ರದ ವಿಚಾರವನ್ನು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಬಹುಶಃ ಬರೆದಿರಬಹುದು ಎಂದು ನುಡಿಯುತ್ತಾರೆ.

ನಾವು ಕ್ರಯದ ಬಾಕಿ ಹಣವನ್ನು ನೀಡಲು ತಯಾರಿದ್ದೆವು ಆದರೆ ಪ್ರತಿವಾದಿಗಳು ಕ್ರಯ ಪತ್ರ ಬರೆದುಕೊಡಲು ಮುಂದೆ ಬರಲಿಲ್ಲ ಎಂಬ ವಿಚಾರವನ್ನು ನಮ್ಮ ವಾದ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. 2014 ನೇ ಇಸವಿಯಲ್ಲಿ ಕ್ರಯದ ಬಾಕಿ ಹಣವನ್ನು ನೀಡಲು ತಯಾರಿದ್ದೆವು ಎಂದು ನಮ್ಮ ವಾದ ಪತ್ರದಲ್ಲಿ ಬರೆದಿದ್ದೇವೆ. ನಮ್ಮ ಕ್ರಯದ ಕರಾರು ಪತ್ರದ ದಿನಾಂಕ 15-06-2006 ಆಗಿರುತ್ತದೆ. ನಿಪಿ-1 ರ ಕರಾರು ಪತ್ರ ಸತ್ಯವಾದ ದಾಖಲೆ ಆಗಿದ್ದರೆ 8 ವರ್ಷಗಳ ಕಾಲ ನೀವು ಸುಮ್ಮನೆ ಇರುತ್ತಿರಲಿಲ್ಲ ಎಂದರೆ ಸಾಕ್ಷಿ ಕ್ರಯ ಪತ್ರ ಬರೆದುಕೊಡಲು ದಾಖಲೆಗಳ ಅವಶ್ಯಕತೆ ಇತ್ತು ಹಾಗೂ ಆ ದಾಖಲೆಗಳನ್ನು ಪ್ರತಿವಾದಿಗಳೇ ಹಾಜರುಪಡಿಸಬೇಕಾದ

ಕಾರಣ ನಾವು ಸುಮ್ಮನಿದ್ದೆವು ಎಂದು ನುಡಿಯುತ್ತಾರೆ. ಕರಾರು ಪತ್ರದ ದಿನಾಂಕದಿಂದ 8 ವರ್ಷಗಳ ಒಳಗೆ ನಾವು ಪ್ರತಿವಾದಿಗಳಿಗೆ ತಿಳುವಳಿಕೆ ಪತ್ರವನ್ನು ಕಳುಹಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಕ್ರಯ ಪತ್ರ ಬರೆದುಕೊಡುತ್ತಾರೆ ಎಂಬ ನಂಬಿಕೆ ಇದ್ದ ಕಾರಣ ತಿಳುವಳಿಕೆ ಪತ್ರವನ್ನು ಕಳುಹಿಸಿರುವುದಿಲ್ಲ ಎಂದು ನುಡಿಯುತ್ತಾರೆ.

**(**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು